ಶ್ರೀ ವೈ.ಕೆ. ರಾಮಯ್ಯ.—ಮಾನ್ಯ ಸದಸ್ಯರು ರೇಷ್ಮೆ ಕಡ್ಡಿಗಳನ್ನು ಉಪಯೋಗಿಸಿ ಕಾಗದ ತಯಾರು ಮಾಡಲು ಏತಕ್ಕೆ ಕಾಗದದ ಕಾರ್ಖಾನೆ ಪ್ರಾರಂಭ ಮಾಡಬಾರದೆಂದು ಕೇಳುತ್ತಿದ್ದಾರೆ. ಆದರೆ ಇದು ಕಚ್ಚಾ ವಸ್ತು ರೂಪದಲ್ಲಿ ಹೆಚ್ಚಾಗಿ ದೊರೆಯುವುದಿಲ್ಲ. ಈಗ ಈ ರೇಷ್ಮೆ ಕಡ್ಡಿಗಳ ಬೆಲೆ ಒಂದು ಲಾರಿ ಲೋಡಿಗೆ ೭೦೦ ರೂಪಾಯಿಗಳಿಂದ ಒಂದು ಸಾವಿರ ರೂಪಾಯಿಗಳವರೆಗೆ ಇದೆ. ಆದ್ದರಿಂದ ಇದು ಕೈಗಾರಿಕೆ ಸ್ಥಾಪನೆ ಮಾಡಲು ಕಚ್ಚಾವಸ್ತು ರೂಪದಲ್ಲಿ ಹೆಚ್ಚಾಗಿ ಸಿಗುವುದಿಲ್ಲವೆಂಬುದು ನನ್ನ ಭಾವನೆ. ಆದರೂ ಈ ಬಗ್ಗೆ ಕೈಗಾರಿಕಾ ಇಲಾಖೆಯವರು ಪರಿಶೀಲನೆ ಮಾಡಿ ಒಂದು ಸಮೀಕ್ಷೆ ನಡೆಸುವುದರ ಮೂಲಕ ಸೂಕ್ತ ಕಾರ್ಯಕ್ರಮ ಕೈಕೊಳ್ಳಬಹುದು.

ಜಮಖಂಡಿ ತಾಲ್ಲೂಕಿನ ಸಾವಳಗಿಯಲ್ಲಿ ಬಸ್ ನಿಲ್ದಾಣ ನಿರ್ಮಾಣದ ಬಗ್ಗೆ

೧೭೮. ಶ್ರೀ ಬಿ.ವಿ. ತುಂಗಳ (ಬೀಳಗಿ).—ಮಾನ್ಯ ರಾಜ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಮಖಂಡಿ ತಾಲ್ಲೂಕಿನ ಸಾವಳಗಿಯಲ್ಲಿ ಬಸ್ ನಿಲ್ದಾಣ ನಿರ್ಮಾಣದ ಬಗ್ಗೆ ಕಳೆದ ವಿಧಾನ ಸಭೆಯಲ್ಲಿ ಸದನದಲ್ಲಿ ತಪ್ಪು ಮಾಹಿತಿ ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ತಪ್ಪು ಮಾಹಿತಿಯನ್ನು ಅಧಿಕಾರಿಗಳು ಒದಗಿಸಿದ್ದಾರೆಂದು ತಿಳಿದ ನಂತರ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಇ) ಬಸ್ ನಿಲ್ದಾಣದ ನಿರ್ಮಾಣ ಯಾವಾಗ ಆರಂಭವಾಗುವುದು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ರಾಜ್ಯ ಸಾರಿಗೆ ಸಚಿವರು).—

ಅ) ಒದಗಿಸಿರುವ ಮಾಹಿತಿ ಸರಿಯಾಗಿದೆ.

ಆ) ಮೇಲೆ ಹೇಳಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ವರ್ಷ ಬಸ್ ಷೆಲ್ಟರ್ ಅನ್ನು ಕಟ್ಟಿಸಲಾಗುವುದು.

ಶ್ರೀ ಬಾಬುರೆಡ್ಡಿ ಎಂ. ತುಂಗಳ್.—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಸಾವಳಗಿ ಕ್ಷೇತ್ರವು ಮಾಜಿ ರಾಷ್ಟ್ರಪತಿಯವರ ಊರು, ಇದು ಬಹಳ ದೊಡ್ಡ ಗ್ರಾಮವಾಗಿದೆ. ಇಲ್ಲಿ ಜೂನಿಯರ್ ಕಾಲೇಜು, ಪೋಲೀಸ್ ಸ್ಟೇಷನ್, ಎ.ಪಿ.ಎಂ.ಸಿ. ಸಬ್ ಮಾರ್ಕೆಟ್ ಎಲ್ಲಾ ಇದೆ. ಪ್ರತಿ ದಿನವೂ ಈ ಊರಿನಿಂದ ೨೦-೩೦ ಬಸ್‌ಗಳು ಹೋಗುತ್ತವೆ. ಇದು ಬಹಳ ಅತ್ಯಂತ್ಯ ಮಾವಾದ ಸಾರಿಗೆ ಕೇಂದ್ರವಾಗಿರುತ್ತದೆ. ಆದೂ ಅಲ್ಲದೆ ಬಸ್ ಸ್ಟೇಷನ್ ಕಟ್ಟುವುದಕ್ಕೆ ಒಳ್ಳೆಯ ಪ್ರಶಸ್ತವಾದ ಊರಾಗಿದೆ. ಆದುದರಿಂದ ಆದಷ್ಟು ಬೇಗ ನಮ್ಮ ಗ್ರಾಮಕ್ಕೆ ಬಸ್ ಸ್ಟಾಂಡ್‌ನ್ನು ಕಟ್ಟಿಸಿಕೊಡ ಬೇಕೆಂದು ತಮ್ಮ ಮೂಲಕ ಸಾರಿಗೆ ಮಂತ್ರಿಯವರಿಗೆ ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಈ ವರ್ಷ ಮಾಡಿಸುತ್ತೇವೆ.

ಸಂಕೇಶ್ವರ ಹಾಗೂ ಹುಕ್ಕೇರಿ ಮತ್ತು 11 ಹಳ್ಳಿಗಳ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದ ಬಗ್ಗೆ.

೧೮೪. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ನಗರಾಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸಂಕೇಶ್ವರ ನಗರಕ್ಕೆ ನೀರು ಪೂರೈಕೆಗಾಗಿ ಪುಂಜೂರು ಮಾಡಿರುವ ಹಣದ ಮೊತ್ತವೆಷ್ಟು

ಆ) ಕರ್ಪೂರ ಹಳ್ಳದ ಮೇಲೆ ನಿರ್ಮಿಸುವ ಕೆರೆಯು ನಿರ್ಮಾಣ ಕಾರ್ಯ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು.

ಇ) ಸಂಕೇಶ್ವರ, ಹುಕ್ಕೇರಿ ಹಾಗೂ ೧೧ ಹಳ್ಳಿಗಳ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಹಿಡಕಲ್ ಜಲಾಶಯದಿಂದ ಪ್ರಾರಂಭಿಸುವುದಾಗಿ ಕೇಂದ್ರ ಸರಕಾರದವರ ನೆರವಿಗಾಗಿ ಬೇಡಿಕೆ